ಪಿ.ಡಬ್ಲ್ಯೂ -1.

ದಿನಾಂಕಃ **17-09-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಫಿರ್ಯಾದುದಾರರ ಪರ ಶ್ರೀಃ ಸಿ ಟಿ ಎನ್ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಫಿರ್ಯಾದುದಾರನಿದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜವಿರುತ್ತವೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿ ತನ್ನ ಪರ ಈಗಾಗಲೇ ನಿಪಿ **-1** ರಿಂದ **6** ದಾಖಲಾತಿಗಳನ್ನು ಗುರುತು ಮಾಡಿಕೊವಾಂಡಿದ್ದು ಸದರಿ ದಾಖಲಾತಿಗಳನ್ನು ತನ್ನ ಪರ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ-**1** ದಾಖಲಾತಿಯನ್ನು ತೋರಿಸಿದ್ದು, ಅದರಲ್ಲಿನ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**1** (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರು ಪರ ಶ್ರೀ ಎಸ್ ಎಸ್. ಜಿ ವಕೀಲರಿಂದಃ**

ನಿಮ್ಮ ಯಜಮಾನರು ಹೆಸರು ಪ್ರೇಮಕುವೂರ ಎಂದರೆ ಸರಿ. ನಿಪಿ-4 ರಲ್ಲಿ ತಂದೆ ಪ್ರೇಮಕುಮಾರ ಎಂದು ನಮೂದಿಸಿ ಕಳುಹಿಸಿದ್ದೀರಿ ಎಂದರೆ ತಪ್ಪಾಗಿದೆ ಎಂದು ಹೇಳುತ್ತಾರೆ. ನಿಮ್ಮ ಫಿರ್ಯಾದು ನಲ್ಲಿ ಪ್ರೇಮಕುಮಾರ ರವರ ಹೆಂಡತಿ ಇದೆ ಎಂದರೆ ಸರಿ. ನಿಪಿ-4 ರಲ್ಲಿ ನ ಪ್ರೇಮಕುಮಾರ ಮಗಳು ಜಯಲಕ್ಷಮ್ಮ ಬೇರೆ , ಫಿರ್ಯಾದು ನಲ್ಲಿ ಪ್ರೇವುಕುಮಾರ ರವರ ಹೆಂಡತಿ ಜಯಲಕ್ಷಮ್ಮ ನ ಹೆಂಡತಿ ಬೇರೆ ಎಂದರೆ ಸಾಕ್ಷಿ ಇಬ್ಬರು ಒಂದೇ ಎಂದು ಹೇಳುತ್ತಾರೆ . ಸಾಕ್ಷಿ ಮುಂದುವರೆದು , ಮಗಳು ಎಂದು ತಪ್ಪಾಗಿದೆ ಎಂದು ಹೇಳುತ್ತಾರೆ. ನಿಮ್ಮ ಯಜಮಾನರು ವಿ ಎಸ್ ಎಸ್ ಎನ್ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿ.

ಆರೋಪಿ ವಿ ಎಸ್ ಎಸ್ ಎನ್ ಸಂಸ್ಥೆಯಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿಯಲ್ಲ. ಫಿರ್ಯಾದು ದಾಖಲಿಸವ ಸಮಯದಲ್ಲಿ ಆರೋಪಿ ವಿ ಎಸ್ ಎಸ್ ಎನ್ ಸಂಸ್ಥೆಯ

ನಿರ್ದೇಶಕ ರಾಗಿದ್ದರು ಎಂದರೆ ಸರಿ. ವಿ ಎಸ್ ಎಸ್ ಎನ್ ಸಂಸ್ದೆಯಲ್ಲಿ 1 5 ಲಕ್ಷ ದೂರುಪಯೋಗ ಆಗಿದೆ ಎಂದು ಆರೋಪ ವರಿಸಿ , ನಿಮ್ಮ ಯಜಮಾನರನ್ನು ಅಮಾನತ್ತು ಮಾಡಲಾಗಿದೆ ಎಂದರೆ ಸಾಕ್ಷಿ ಅಮಾನತ್ತು ಮಾಡಿಲ್ಲ, ಅವರೇ ರಾಜೀನಾಮೆ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

ನಿಮ್ಮ ಯಜಮಾನರು ವಿರುದ್ಧ ಎ ಆರ್ ರವರ ಸಮಕ್ಷಮ ಹಣ ದುರುಪಯೋಗದ ಬಗ್ಗೆ ಸಂಸ್ಥೆಯವರು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ನಾವೇ ದೂರನ್ನು ಕೊಟ್ಟಿದ್ದು ಹಣವನ್ನು ಸಂಸ್ಥಯಿಂದ ಕೊಡಬೇಕು ಎಂದು ಅದೇಶ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಎಸ್ ಎಸ್ ಎಲ್ ಸಿ ವರಗೊ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ , ಆಂಗ್ಲ ಭಾಷೆ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ಫಿರ್ಯಾದು ಕನ್ನಡ ಭಾಷೆ ಯಲ್ಲಿ ಇದೆ. ಫಿರ್ಯಾದಿನಲ್ಲಿ ನಿಮ್ಮ ಜೀವನೋಪಾಯಕ್ಕಾಗಿ ಎನೂ ಕೆಲಸ ಮಾಡುತ್ತಿದ್ದೀರಿ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಬೇಕು ಎಂದು ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ.

ನಿಮಗೆ ಸೇರಿದ ಬ್ಯಾಂಕ್ ಖಾತೆ ಇದೆಯೇ ಎಂದರೇ ಸಾಕಿ ಇದೆ ಎಂದು ಹೇಳುತ್ತಾರೆ. ನಿವ್ಮ ಬ್ಯಾಂಕ್ ಖಾತೆಯ ವಹಿವಾಟಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದೆಲ್ಲಾ ಬೇಕಲು ಎಂದು ನನಗೆ ಗೂತ್ತಾಗಲಿಲ್ಲ ಎಂದು ಹೇಳುತ್ತಾರೆ. ಸದರಿ ದಾಖಲತಾತಿಯನ್ನು ಮುಂದಿನ ದಿನಗಳಲ್ಲಿ ಹಾಜರುಪಡಿಸಬಹುದೇ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎಂದು ಹೇಳುತ್ತಾರೆ.

ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನಿಮ್ಮ ಪಿರ್ಯಾದಿನಲ್ಲಾಗಲೀ , ನಿಪಿ-4 ರಲ್ಲಾಗಲೀ , ಮುಖ್ಯ ವಿಚಾರಣೆಯಲ್ಲಾಗಲೀ, ನಿಮ್ಮ ಹಾಗೂ ಆರೋಪಿ ವ್ಯವಹಾರ ಎಲ್ಲಿ ನಡೆಯಿತು ಎಂದು ಬೆರಸಿಲ್ಲ ಎಂದರೆ ಸರಿ. ನೀವು ಯಾವುದಾದರೂ ವ್ಯವಹಾರ ಮಾಡಿದರೆ ಅದವಾ ಗಲಾಟೆ ಮಾಡಿದರೆ ಎಲ್ಲಿ ಆಯಿತು ಎಂಬ ವಿಚಾರವನ್ನು ಬರೆಸುವ ಅಭ್ಯಾಸ ಇದೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಫಿರ್ಯಾದಿನಲ್ಲಿ ಅದವಾ ನಿಪಿ-4 ರಲ್ಲಾಗಲೀ ವಹಿವಾರು ನಡೆದ ಸ್ದಳವನ್ನು ನಮೂದಿಸಿಲ್ಲದೆ ಇರುವುದರಿಂದ ಇದೇ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆ ಎಂದು ಯಾವ ಆಧಾರದ ಮೇಲೆ ಫಿರ್ಯಾದುದನ್ನು ದಾಖಲಿಸಿದ್ದೀರಿ ಎಂದರೆ ಸಾಕ್ಷಿ ನಾವು ಹುಣಸೂರು ತಾಲ್ಲೂಕಿನವನರು ಆರಗಿರುವುದರಿಂದ ಇದೇ ನ್ಯಾಯಾಲಯಎಕ್ಕೆ ಬರುತತದೆ ಎಂದು ಹಾಕಿದ್ದೇನೆ ಎಂದು ಹೇಳುತ್ತಾರೆ.

ಸಾಮಾನ್ಯವಾಗಿ ನೀವು ಯಾವುದಾದರೂ ಹಣಕಾಸಿನ ವ್ಯವಹಾರ ಬೇರೆಯವರೊಂದಿಗೆ ಮಾಡಿದಾಗ ಅವರು ಗೊತ್ತು, ಅವರು ಎಷ್ಟು ವರ್ಷಗಳಿಂದ

ಪರಿಚಯ ಇದೆ ಎಂದು ಹೇಳುವ ಅಬ್ಯಾಸ ಇದೆ ಎಂದರೆ ಸರಿ. ನಿಮ್ಮ ಫಿರ್ಯಾದಿನಲ್ಲಾಗಲೀ , ನಿ,ಪಿ-4 ರಲ್ಲಾಗಲೀ ಅದ,ವಾ ಮುಖ್ಯ ಚವಿಳಿವರಣೆುಲ್ಲಾಗಲೀ ಆರೋಪಿ ಗೊತ್ತು ಮತ್ತು ಇಂತಹ ಊರಿನವರು ಎಂದು ಎಲ್ಲೂ ನಮೂದಿಸಿಲ್ಲ ಎಂದರೆ ಸಾಕ್ಷಿ ದೂರನ್ನ ದಾಖಲಿಸಬೇಕಾದರೆ ನನಗೆ ಗೊತ್ತಾಗಲಿಲ್ಲ ಎಂದು ಹೇಳುತ್ತಾರೆ. ನಿಮಾಗೂ ಹಾಗೂ ಆರೋಪಿಗೂ ಯಾವುದೇ ವ್ಯವಹಾರ ಇಲ್ಲದೇ ಇರುವುದರಿಂದ ಮೇಲ್ಕಂಡ ವಿಚಾರಗಳನ್ನು ಪ್ರಸ್ತಾಪ ಮಾಡಿಲ್ಲ ಎಂದರೆ ಸಾಕ್ಷಿ ವ್ಯವಹಾರ ಇದೆ ಎಂದು ಹೇಳುತ್ತಾರೆ. ನೀವು ಕನ್ನಡದಲ್ಲಿರುವ ದೂರಿಗೆ ಮಾತ್ರ ಸಹಿ ಹಾಕಿರುತ್ತಾರೆ ಎಂದರೆ ಸಾಕ್ಷಿ ಸರಿ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ದೊಡ್ಡ ವೂೕತ್ತದ ಹಣವನ್ನು ಸಾಲ ಪಡೇಯಬೆಕಾದರೆ ಮುಂಚಿತವಾಗಿ ಸಾಲ ಪಡೆಯುವರ ಬಳಿ ಸಾಲದ ಪ್ರಸ್ತಾವಣೆಯನ್ನು ಇಟ್ಟಿರುತ್ತಾರೆ ಎಂದರೆ ಸರಿ. ನೀವು ನಿಮ್ಮ ದೂರಿನಲ್ಲಾಗಲೀ , ನಿಪಿ-4 ರಲ್ಲಾಗಲೀ ಹಾಗೂ ಮುಖ್ಯ ವಿಚಾರಣೆಯಾಲ್ಲಾಗಲೀ , ಆರೋಪಿ ಹಣಕ್ಕಾಗಿ ನಿವಲ್ಮು ಬಳಿ ಪ್ರಸ್ತಾವಣೆ ಯಾವ ದಿನಾಂಕ ಮಾಡಿದ್ದರು ಎಂದು ಎಲ್ಲೂರ ಬರೆಸಿಲ್ಲ ಎಂದರೆ ಸರಿ. ಆರೋಪಿ ನಿಮ್ಮ ಬಳಿ ಹಣ ಕೇಳಿಲ್ಲ ಹಾಗೂ ನಿಮ್ಮಿಂದ ಹಣ ಪಡೆದಿಲ್ಲ ಹಾಗಾಗಿ ಪ್ರಸ್ತಾವನೆಯನ್ನು ಬರೆಸಿಲ್ಲ ಎಂದರೆ ಸಾಕ್ಷಿ ಹಣ ಪಡೆದಿರುತ್ತಾರೆ ಎಂದು ಹೇಳುತ್ತಾರೆ.

(ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ಪಾಟೀ ಸವಾಲಿಗಾಗಿ ಸಮಯವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.

ಸಿ.ಸಿ. **545/2020**

ಪಿ.ಡಬ್ಲೂ **-1.**

ದಿನಾಂಕಃ **17-09-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಫಿರ್ಯಾದುದಾರರ ಪರ ಶ್ರೀಃ ಪಿ ಎನ್ ಆರ್ ವಕೀಲರಿಂದಃ

ನಾನು ಈ ಪ್ರಕರಣದಲ್ಲಿ ಫಿರ್ಯಾದುದಾರನಿದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜವಿರುತ್ತವೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿ ತನ್ನ ಪರ ಈಗಾಗಲೇ ನಿಪಿ -1 ರಿಂದ 5 ಮತ್ತು ನಿಪಿ-5 (ಎ) ದಾಖಲಾತಿಗಳನ್ನು ಗುರುತು ಮಾಡಿಕೊವಾಂಡಿದ್ದು ಸದರಿ ದಾಖಲಾತಿಗಳನ್ನು ತನ್ನ ಪರ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ-1 ದಾಖಲಾತಿಯನ್ನು ತೋರಿಸಿದ್ದು, ಅದರಲ್ಲಿನ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ. ಎ ವಕೀಲರಿಂದ ಪಾಟೀಸವಾಲಿಗಾಗಿ, ಸಮಯವನ್ನು ಕೋರಿದ್ದು, ಆಲಿಸಿ ಅನುಮತಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.